**ದಿನಾಂಕಃ 06-03-2021 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃವಾದಿ ಪರ ಶ್ರೀ. ಎ.ಎಸ್.ಎಸ್ .ವಕೀಲರಿಂದಃ**

ನಾನು ಓ.ಎಸ್. ನಂ. 205/2015 ರಲ್ಲಿ ಮಾಲೀಕತ್ವ ಘೋಷಣೆ ಮತ್ತು ಕ್ರಯಪತ್ರ ನಮಗೆ ಬಂಧನಕಾರಿಯಲ್ಲ ಎಂದು ಆದೇಶಿಸುವಂತೆ ದಾವೆ ಹೂಡಿರುತ್ತೇನೆ. ನಾನು ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳು ಹಾಕಿರುವ ಪ್ರತಿವಾದಪತ್ರವನ್ನು ಕೂಲಂಕುಷವಾಗಿ ಓದಿರುವುದಿಲ್ಲ. ನಾನು ಸದರಿ ದಾವೆಯಲ್ಲಿ ಸರ್ವೆ ನಂ.54/2, 54/5 54/6, 62/1, ಮತ್ತು ಮನೆಯನ್ನು ಮಾರಾಟ ಮಾಡಿರುವುದಾಗಿ ಹೇಳಿದ್ದೇನೆಂದರೆ ಸರಿ. ಸದರಿ ಸ್ವತ್ತುಗಳೊಂದಿಗೆ ನನ್ನ ತಂದೆಯು ದಾವಾಸ್ವತ್ತನ್ನು ಕೂಡ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದ ಸ್ವತ್ತುಗಳಿಗೆ ನೋಂದಾಯಿತ ಕ್ರಯಪತ್ರ ಮಾಡಲಾಗಿದೆ ಮತ್ತು ಪ್ರತಿಫಲ ಪಡೆಯಲಾಗಿದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ನೋಂದಾಯಿತ ಕ್ರಯಪತ್ರ ಬರೆಸಿಕೊಂಡ ನನ್ನ ದೊಡ್ಡಪ್ಪನಿಗೆ ದಾವಾಸ್ವತ್ತುನ್ನು ಮಾತ್ರ ಮೋಸದಿಂದ ಬರೆಸಿಕೊಳ್ಳುವ ಇರಾದೆ ಏನಿತ್ತು ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತಿನಲ್ಲಿ ನಾವು ಸ್ವಾಧೀನ ಹೊಂದಿದ್ದು, ಅಭಿವೃದ್ಧಿ ಪಡಿಸಿದ್ದರಿಂದ ಸದರಿ ಕ್ರಯಪತ್ರವು ಸೃಷ್ಟಿತವಾಗಿದೆ ಎಂದು ಹೇಳುತ್ತೇನೆ. ದಾವಾಸ್ವತ್ತಿನಲ್ಲಿ ಮೂಲದಿಂದ ಪ್ರತಿವಾದಿ-1 ರವರೇ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಕ್ರಯದ ನಂತರ ಸದರಿ ಸ್ವಾಧೀನವನ್ನು ಮುಂದುವರೆಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ-1 ರವರ ಮರಣಾನಂತರ ಅವರ ಮಕ್ಕಳುಗಳು ಸ್ವಾಧೀನ ಮುಂದುವರೆಸಿದ್ದಾರೆಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನ ಇರುವುದಾಗಿ ತಾತ್ಕಾಲಿಕ ಆದೇಶ ಪಡೆದಿದ್ದು, ಆದರೆ ಕೆವಿಯಟ್ ಇದ್ದುದ್ದರಿಂದ ಸದರಿ ಆದೇಶ ವಜಾ ಆಗಿದೆ ಎಂದರೆ ಸರಿ. ನಾನು ಮೇಲೆ ಹೇಳಿದ ಮಾರಾಟ ಮಾಡಿರುವ ಸ್ವತ್ತು ಗಳು ಕಡಿಮೆ ವಿಸ್ತೀರ್ಣದ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತು ಹೆಚ್ಚು ವಿಸ್ತೀರ್ಣ ಹೊಂದಿರುವ ಸ್ವತ್ತು ಎಂದರೆ ಸರಿ. ಬೆಂಗಳೂರಿನಲ್ಲಿ ಇರುವ ಸ್ವತುಗಳ ಅಭಿವೃದ್ಧಿಗಾಗಿ ಮೇಲೆ ಹೇಳಿದ ಸ್ವತ್ತುಗಳ ಮಾರಾಟದ ಹಣ ಸಾಕಾಗುವುದಿಲ್ಲ ಎಂದು ದಾವಾಸ್ವತ್ತುನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ಲೋನ್ ಪಡೆದ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಬೆಂಗಳೂರಿನಲ್ಲಿ ಖರೀದಿ ಮತ್ತು ಅಭಿವೃದ್ಧಿ ಯಲ್ಲಿ ಯಾವ ಯಾವ ಸ್ವತ್ತಿಗೆ ಎಷ್ಟು ಎಷ್ಟು ಹಣ ಹೂಡಿಕೆ ಮಾಡಿದ್ದೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಸದರಿ ಸಮಯದಲ್ಲಿ ನಾನು ಯಾವ ಕೆಲಸ ಮಾಡುತ್ತಿದ್ದೆ ಎಂದು ಮತ್ತು ಎಷ್ಟು ಆದಾಯ ಬರುತ್ತಿತ್ತು ಎಂದು ದಾಖಲೆಯನ್ನು ಹಾಜರುಪಡಿಸುತ್ತೇನೆ. ನನಗೆ ಸದರಿ ಸಮಯದಲ್ಲಿ ತಿಂಗಳಿಗೆ 15 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು. ಬೆಂಗಳೂರಿನ ಸ್ವತ್ತುಗಳ ಖರೀದಿ ಮತ್ತು ಕಟ್ಟಡ

ನಿರ್ಮಾಣ ಸಂದರ್ಭದಲ್ಲಿ ನಾನು ಯಾವುದೇ ಹೂಡಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಬೇರೆ ಸ್ವತ್ತುಗಳನ್ನು ಮಾರಾಟ ಮಾಡಿರುವಂತೆ ದಾವಾಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ನಾನು ಮತ್ತು ನನ್ನ ಸಹೋದರಿಯವರು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ನನ್ನ ತಂದೆ ಕ್ರಯಪತ್ರ ಬರೆದುಕೊಟ್ಟಿದ್ದರು ಮತ್ತು ನಾವುಗಳೆಲ್ಲಾ ಸಾಕ್ಷಿದಾರರಾಗಿ ಸಹಿ ಮಾಡಿದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಪ್ರತಿವಾದಪತ್ರ ಸಲ್ಲಿಸಿರುತ್ತೇನೆ. ಪ್ರಸ್ತುತ ದಾವೆಯ ಪ್ರತಿವಾದಪತ್ರದಲ್ಲಿ ನನ್ನ ತಂದೆ ಮಾರಾಟ ಮಾಡಿದ ಇತರ ಸ್ವತ್ತುಗಳ ವಿಚಾರವನ್ನು ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸ್ವತ್ತುಗಳ ವಿವಾದ ಇರುವುದಿಲ್ಲ ಎನ್ನುತ್ತಾರೆ. ದಾವಾಸ್ವತ್ತನ್ನು ಹೊತುಪಡಿಸಿ ಇತರ ಸ್ವತ್ತುಗಳಲ್ಲಿ ವಿವಾದ ಇಲ್ಲ ಎಂಬ ವಿಚಾರವನ್ನು ನನ್ನ ಪ್ರತಿವಾದಪತ್ರಲ್ಲಿ ಹೇಳಿಲ್ಲ ಎಂದರೆ ಸರಿ. ನಮ್ಮ ತಂದೆ ವಿಭಾಗಕ್ಕೆ ಬಂದಿದ್ದ ಸ್ವತ್ತುಗಳಲ್ಲಿ ಮುಪ್ಪೆನಹಳ್ಳಿ ಗ್ರಾಮದಲ್ಲಿ ಇರುವ ಸರ್ವೆ ನಂ. 65/2 ರ ಸ್ವತ್ತನ್ನು ಹೊರತುಪಡಿಸಿ ಮನೆಯ ಸ್ವತ್ತನ್ನು ಸೇರಿದಂತೆ ಉಳಿದ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿದ್ದೇವೆಂದರೆ ಸರಿಯಲ್ಲ. ದಾವಾಸ್ವತ್ತು ಹೆಚ್ಚಿನ ವಿಸ್ತೀರ್ಣ ಹೊಂದಿರುವುದರಿಂದ ಸದರಿ ಸ್ವತ್ತನ್ನು ಕಬಳಿಸಲು ಮಾರಾಟ ಮಾಡಿದ್ದರೂ ಕೂಡ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನ ಹೊಂದಿರುವುದಾಗಿ ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ, ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಾನು ದಾವಾಸ್ವತ್ತಿನ ಸ್ವಾಧೀನಾನುಭವ ಹೊಂದಿಲ್ಲದ ಕಾರಣ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಮತ್ತು ಪ್ರತಿವಾದಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.